# ಸಂಸಾರದಲ್ಲಿ ಸಾಧನೆ



❋ ಈ ಸಂಸಾರ ಒಂದು ಮುಳ್ಳುಗಿಡ, ಕೈ ಹಾಕಿತು ಅಂದರೆ ತರಚಿ ರಕ್ತಸುರಿಯಲಾರಂಭಿಸುತ್ತದೆ. ಒಂದು ಮುಳ್ಳುಗಿಡ ತೆಗೆದುಕೊಂಡು ಬಂದು ಅದರ ಹತ್ತಿರ ಕುಳಿತುಕೊಂಡು ಜಪಿಸು : 'ಈ ಗಿಡ ಸುಟ್ಟುಹೋಯಿತು' ಎಂದು. ಅದಕ್ಕೆ ಅದು ಸುಟ್ಟು ಹೋಗುತ್ತದೆಯೆ ? ಜ್ಞಾನಾಗ್ನಿಯನ್ನು ಹೊತ್ತಿಸಿಕೊ, ಆ ಅಗ್ನಿಯಿಂದ ಅದನ್ನು ಸುಡು. ಆಗ ಮಾತ್ರವೆ ಅದು ಸುಟ್ಟು ಬೂದಿಯಾಗುತ್ತದೆ.

❋ ಈ ಕಲಿಯುಗದಲ್ಲಿ ವೇದೋಕ್ತ ಕರ್ಮಗಳನ್ನು ಮಾಡಲು ಸಮಯವೆಲ್ಲಿ? ಅದಕ್ಕಾಗಿಯೇ ಈ ಯುಗಕ್ಕೆ ನಾರದೀಯ ಭಕ್ತಿ. ಕರ್ಮಯೋಗ ಬಹಳ ಕಠಿಣ. ನಿಷ್ಕಾಮ ಭಾವನೆಯಿಂದ ಮಾಡಲಾಗದಿದ್ದರೆ ಅದು ಬಂಧನಕ್ಕೆ ಕಾರಣವಾಗುತ್ತದೆ. ಜೊತೆಗೆ ಈ ಶರೀರ ಅನ್ನಗತ ಪ್ರಾಣ ಬೇರೆ, ವಿಧಿನಿಯಮಗಳಿಗನುಸಾರ ಕರ್ಮಮಾಡಲು ಸಮಯವಿಲ್ಲ. ದಶಮೂಲಿಕೆಗಳ ಕಷಾಯ ಕುಡಿಯಲು ಹೋದರೆ, ರೋಗಿ ಈ ಕಡೆ ಯಮಪುರಿಗೆ ಟಿಕೆಟ್ಟು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಈಗಿನವರಿಗೆ ಫೀವರ್ ಮಿಕ್ಸ್ಚರ್.

❋ ಯಾರು ಸಂಸಾರಿಗಳೊ, ಯಾರಿಗೆ ದೇಹಬುದ್ಧಿ ಇದೆಯೊ, ಅವರಿಗೆ 'ಸೋಽಹಂ' ಭಾವ ಒಳ್ಳೆಯದಲ್ಲ. ಸಂಸಾರಿಗಳಿಗೆ ಯೋಗವಾಸಿಷ್ಠ ವೇದಾಂತ, – ಒಳ್ಳೆಯದಲ್ಲ , ಬಹಳ ಕೆಡುಕಾಗುತ್ತದೆ. ಸಂಸಾರಿಗಳು ಸೇವ–ಸೇವಕ ಭಾವವನ್ನು ಅನುಸರಿಸಬೇಕು. ಅವರು ಭಾವಿಸಬೇಕು: 'ಹೇ ಭಗವಂತ ! ನೀನು ಸೇವಾರ್ಹ ಪ್ರಭು, ನಾನು ಸೇವಕ, ನಾನು ನಿನ್ನ ದಾಸ' ಎಂದು. ಯಾರಿಗೆ ದೇಹ ಇದೆಯೋ, 'ಸೋಽಹಂ' ಭಾವ ಅವರಿಗೆ ಒಳ್ಳೆಯದಲ್ಲವೇ ಅಲ್ಲ.

❋ ನೀನು ಸಂಸಾರದಲ್ಲೇನೊ ಇದ್ದೀಯೆ, ಇದ್ದರೇನು ಭಯ? ಕರ್ಮಫಲವನ್ನು ಭಗವಂತನಿಗೆ ಅರ್ಪಿಸಿಬಿಡಬೇಕು. ನೀನು ಮಾತ್ರ ಯಾವ ಫಲವನ್ನೂ ಅಪೇಕ್ಷಿಸಕೂಡದು. ಆದರೆ ಒಂದು ವಿಷಯ, ಭಕ್ತಿಕಾಮನೆ ಕಾಮನೆಗಳ ಗುಂಪಿಗೆ ಸೇರಿದುದಲ್ಲ , ಭಕ್ತಿಕಾಮನೆಯನ್ನು, ಭಕ್ತಿಪ್ರಾರ್ಥನೆಯನ್ನು ಮಾಡಬಹುದು.

❋ **ಭಕ್ತ :** ಮಹಾಶಯರೆ, ಸಂಸಾರವನ್ನು ನಾವು ತ್ಯಜಿಸಿಬಿಡಬೇಕೇನು ?

**ಶ್ರೀರಾಮಕೃಷ್ಣರು :** ಇಲ್ಲ , ಬೇಕಾಗಿಲ್ಲ. ನೀವೇಕೆ ತ್ಯಜಿಸಲು ಹೋಗಬೇಕು? ಸಂಸಾರದಲ್ಲಿ ಇದ್ದರೂ ಆತ ದೊರೆಯಬಹುದು. ಆದರೆ ಮೊದಲು ಕೆಲವು ಕಾಲ ನಿರ್ಜನಪ್ರದೇಶದಲ್ಲಿ ಇರಬೇಕು, ನಿರ್ಜನಪ್ರದೇಶದಲ್ಲಿದ್ದು ಸಾಧನೆ ಮಾಡಬೇಕು. ಮನೆಯ ಹತ್ತಿರ ಅಂತಹ ಒಂದು ಸ್ಥಳವನ್ನು ಮಾಡಿಕೊಳ್ಳಬೇಕು. ಅಲ್ಲಿಂದ ಊಟಮಾಡಿ ಮತ್ತೆ ಹಿಂದಿರುಗಿ ಅಲ್ಲಿಗೆ ಹೋಗುವಂತಿರಬೇಕು.

❋ ಯಾವ ಕೊಠಡಿಯಲ್ಲಿ ವಿಷಮಶೀತ ಜ್ವರದ ರೋಗಿ ಮಲಗಿರುವನೊ, ಅದೇ ಕೊಠಡಿಯಲ್ಲಿ ಇವೆ ಉಪ್ಪಿನಕಾಯಿ, ಹುಣಿಸೆಹಣ್ಣು, ನೀರಿನ ಕೊಡಗಳು ! ಆತನನ್ನು ರೋಗ ಹೇಗೆ ತಾನೆ ಬಿಟ್ಟು ತೊಲಗೀತು?

❋ ಹೆಂಗಸು ಗಂಡಸಿಗೆ ಉಪ್ಪಿನಕಾಯಿ ಮತ್ತು ಹುಣಿಸೆಹಣ್ಣು , ಭೋಗವಾಸನೆಯ ನೀರಿನ ಕೊಡ. ವಿಷಯತೃಷ್ಣೆಗೆ ಕೊನೆಯೆಂಬುದೇ ಇಲ್ಲ. ಜೊತೆಗೆ ವಿಷಯವಸ್ತುಗಳು ರೋಗಿಯ ಕೊಠಡಿಯಲ್ಲಿ ಇವೆ. ಪರಿಸ್ಥಿತಿ ಹೀಗಿದ್ದರೆ, ಏನು ವಿಷಮಶೀತ ಜ್ವರ ಬಿಟ್ಟು ಹೋಗುವುದೆ? ಎಲ್ಲಿ ಉಪ್ಪಿನಕಾಯಿ ಆಗಲಿ, ಹುಣಿಸೆಹಣ್ಣು ಆಗಲಿ, ನೀರಿನ ಕೊಡಗಳೆ ಆಗಲಿ ಇಲ್ಲವೊ ಅಲ್ಲಿ ಆತನನ್ನು ಕೆಲವು ದಿವಸಗಳ ಮಟ್ಟಿಗೆ ಇಟ್ಟಿರಬೇಕು. ಅನಂತರ ಆತ ರೋಗದಿಂದ ಪಾರಾಗಿ ಅದೇ ಕೊಠಡಿಗೆ ಬಂದು ಇದ್ದರೂ ಭಯವೇನಿಲ್ಲ. ಆತನ ಸಾಕ್ಷಾತ್ಕಾರ ಪಡೆದ ವ್ಯಕ್ತಿ ಸಂಸಾರದಲ್ಲಿ ಬಂದು ಇದ್ದರೂ ಕಾಮಕಾಂಚನ ಆತನಿಗೆ ಏನನ್ನೂ ಮಾಡಲಾರವು. ಆಗ ಆತ ಜನಕರಾಜನಂತೆ ನಿರ್ಲಿಪ್ತನಾಗಿ ಇರಬಲ್ಲ.

❋ ಆದರೆ ಪ್ರಥಮದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು, ಅತ್ಯಂತ ನಿರ್ಜನಪ್ರದೇಶದಲ್ಲಿ ಇದ್ದು ಸಾಧನೆ ಮಾಡಬೇಕು. ಅಶ್ವತ್ಥವೃಕ್ಷ ಇನ್ನೂ ಸಸಿಯಾಗಿರುವಾಗ ಆಡು ದನಕರುಗಳು ಅದನ್ನು ತಿಂದು ನಾಶಮಾಡದೆ ಇರಲಿ ಎಂದು ಅದರ ಸುತ್ತಲೂ ಬೇಲಿ ಹಾಕುತ್ತಾರೆ. ಆದರೆ ಬುಡ ದಪ್ಪವಾಯಿತೆಂದರೆ ಬೇಲಿಯ ಆವಶ್ಯಕತೆಯೇನಿರದು. ಆಗ ತೆಗೆದುಕೊಂಡು ಹೋಗಿ ಆನೆಯನ್ನು ಕಟ್ಟಿದರೂ ಅದಕ್ಕೆ ಏನೂ ಆಗದು. ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡಿ ಭಗವಂತನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸಿ ಶಕ್ತಿಯನ್ನು ವೃದ್ಧಿಮಾಡಿಕೊಂಡು ಮನೆಗೆ ಹೋಗಿ ಸಂಸಾರದಲ್ಲಿ ಇದ್ದರೆ ಕಾಮ, ಕಾಂಚನ ನಿನ್ನನ್ನು ಏನೂ ಮಾಡಲಾರವು.

❋ ಅಲುಗಾಡದ ಸ್ಥಳದಲ್ಲಿ ಹಾಲಿಗೆ ಹೆಪ್ಪು ಹಾಕಿ ಇಟ್ಟು ಅನಂತರ ಬೆಣ್ಣೆ ತೆಗೆಯಬೇಕು. ಮನಸ್ಸೆಂಬ ಹಾಲಿನಿಂದ ಜ್ಞಾನ–ಭಕ್ತಿ ಎಂಬ ಬೆಣ್ಣೆಯನ್ನು ಒಮ್ಮೆ ತೆಗೆದುಬಿಟ್ಟಿದ್ದೆ ಆದರೆ ಅದನ್ನು ಸಂಸಾರವೆಂಬ ನೀರಿನಲ್ಲಿ ಇಟ್ಟರೂ ನಿರ್ಲಿಪ್ತವಾಗಿ ಮೇಲೆ ತೇಲುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ